1965-66	20 acres
1967-68	40 acres
1968-69	40 acres
1969-70	20 acres
	144 acres

2. *Mudukathore and Ballubetta Forest:*

Pits have been dug in Mudukathore and Ballubetta forests transferred from Revenue Department and plants of mixed variety have been planted as noted below:

1964-65	50 acres
1966-66	175 acres

(*b*) Plants will be grown in the possible extent of area depending on the availability of funds.

ಶ್ರೀ ಟಿ. ಪಿ. ಬೋರಯ್ಯ: —೧೯೭೦–೭೧ನೇ ಸಾಲಿಗೆ ಎಷ್ಟು ಎಕರೆಗಳಲ್ಲಿ ಗಿಡಗಳನ್ನು ನೆಡುವುದಕ್ಕೆ ಏರ್ಪಾಡು ಮಾಡುತ್ತೀರಿ ಮತ್ತು ಇದಕ್ಕೆ ಎಷ್ಟು ಹಣ ಒದಗಿಸುತ್ತೀರಿ?

† ಶ್ರೀ ಆಲೂರು ಹನುಮಂತಪ್ಪ:—ಈಗತಾನೇ ಮಾನ್ಯ ಸಭೆ ಬಜೆಟ್ ಮಂಜೂರು ಮಾಡಿದೆ. ಅಲ್ಲಿರುವ ಜಮಿನಿನ ಪರಿಮಿತಿಯನ್ನು ನೋಡಿಕೊಂಡು ಹಣ ಕೊಡುತ್ತೇವೆಂದು ಹೇಳಿದ್ದೆವು. ಅದು ಕೂಡ ಸಾಕಾಗುವುದಿಲ್ಲ. ಬೇಕಾದಷ್ಟು ಪ್ರದೇಶ ಇದೆ. ಅದಕ್ಕಾಗಿ ಫಾರೆಸ್ಟ್ ಕಾರ್ಪೊರೇಶನ್ ಮಾಡುತ್ತಿದ್ದೇವೆ. ಇದರಿಂದ ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಗಿಡಗಳನ್ನು ನೆಡುಸುವುದಕ್ಕೆ ಸಾಧ್ಯವಾಗಬಹುದೆಂಬ ಯೋಜನೆ ಇದೆ.

ಶ್ರೀ ಬಿ. ದೊಡ್ಡಬೋರೆಗೌಡ:—ನಿಮ್ಮ ಯೋಜನೆ ಪ್ರಕಾರ ೮ ವರ್ಷಗಳಲ್ಲಿ ೩೬೯ ಎಕರೆಗಳಲ್ಲಿ ಮರಗಳನ್ನು ಬೆಳಸಿದ್ದೇವೆಂದು ಹೇಳಿದ್ದೀರಿ. ಈ ೩೬೯ ಎಕರೆಗಳಲ್ಲಿ ಯಾವ್ಯಾವ ಜಾತಿಯ ಮರ ಎಷ್ಟೆಷ್ಟು ಬೆಳೆಸಿದ್ದೀರಿ ಮತ್ತು ಅವುಗಳಲ್ಲಿ ಬದುಕಿರುವುದು ಎಷ್ಟು, ಸತ್ತು ಹೋಗಿರುವುದು ಎಷ್ಟು?

ಶ್ರೀ ಆಲೂರು ಹನುಮಂತಪ್ಪ:—ಕ್ಯಾಶ್ಯುನಟ್, ಯೂಕ್ಲಿಪ್ಟಸ್‌ಗಳ ವಿವರವನ್ನು ಅದರಲ್ಲಿ ಕೊಟ್ಟಿದ್ದೇವೆ. ಮತ್ತು ೧೯೬೪–೬೫ರಲ್ಲಿ ಮುಡುಕುತೊರೆ ಮತ್ತು ಬಳ್ಳುಬೆಟ್ಟದಲ್ಲಿ ಮಿಕ್ಸೆಡ್ ಫಾರೆಸ್ಟ್ ಹಾಕಿದ್ದೇವೆ. ಯಾವ್ಯಾವ ಜಾತಿಯದೆಂಬ ವಿವರ ನನ್ನ ಹತ್ತಿರ ಇಲ್ಲ.

SUPPLY OF MANGANESE ORE BY THE BOARD OF MINERAL DEVELOPMENT

363. Sri I. SOMASEKHARAPPA (Hosanagar):—

Will the Minister for Industries, Information and Publicity be pleased to state:—

(*a*) the quantum of manganese ore the Board of Mineral Development undertook to supply M/s Rambhadur Thakur Company, Bombay, through Gangolli port;

(*b*) how much has been supplied so far;

(SRI I. SOMASHEKARAPPA)

(*c*) the rate at which it was agreed to supply;

(*d*) the loss incurred by the Board of Mineral Development on account of this control so far;

(*e*) whether M/s Rambhadur Thakur Company has claimed any compensation for the loss they have incurred?

Sri A. P. APPANNA (Deputy Minister for Industries):—

(*a*) Two lakhs tons of 30/32 per cent grade Manganese ore.

(*b*) One lakh tons.

(*c*) Rs. 47 per D. L. T. F. O. B. T. Coondapur (Ganguli)

(*d*) Rs. 3.7 lakhs.

(*e*) Yes. A Civil Suit has been filed which is pending.

ಶ್ರೀ ಐ. ಸೋಮಶೇಖರಪ್ಪ:—ತಾವು ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಒಂದು ಲಕ್ಷ ಟನ್ ಅದುರನ್ನು ಸಪ್ಲೈ ಮಾಡಿದ್ದಾರೆ ಎಂದು ಹೇಳಿದ್ದೀರಿ. ಹೀಗೆ ಸಪ್ಲೈ ಮಾಡಿರುವುದರಿಂದ ೩.೭ ಲಕ್ಷ ರೂಪಾಯಿ ನಷ್ಟವಾಗುವುದಕ್ಕೆ ಕಾರಣವೇನು? ಮತ್ತು ರಾಮ್‌ಬಹದೂರ್ ಠಾಕೂರ್ ಕಂಪೆನಿಯವರಿಗೆ ಒಂದು ಲಕ್ಷ ಟನ್ ಸಪ್ಲೈ ಮಾಡಿದೆ. ಆದರ ಬಾಬ್ತು ಬರಬೇಕಾದ ಹಣ ಬಂದಿದೆಯೇ, ಬರದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಮೂರನೆಯದು–ರಾಮ್‌ಬಹದೂರ್ ಠಾಕೂರ್ ಕಂಪೆನಿಯವರು ಕ್ಲೈಮ್ ಮಾಡಿರುವ ಹಣ ಎಷ್ಟು ಮತ್ತು ಯಾವ್ಯಾವ ಕಾರಣಗಳಿಗಾಗಿ ಕ್ಲೈಮ್ ಮಾಡಿದ್ದಾರೆ?

ಶ್ರೀ ಎ. ಪಿ. ಅಪ್ಪಣ್ಣ:—ಈಗ ಒಂದನೆಯ ಪ್ರಶ್ನೆಗೆ, ಹೇಳುತ್ತೇನೆ. ಓರನ್ನು ಟನ್ನಿಗೆ ೪೭ ರೂಪಾಯಿಯಲ್ಲಿ ಸಪ್ಲೈ ಮಾಡಿದ್ದು. ಆದರೆ ಇದನ್ನು ತಯಾರು ಮಾಡುವಂತಹ ಕಾಲದಲ್ಲಿ ಅದರ ಬೆಲೆ ೫೧–೫೨ ರೂಪಾಯಿಗಳಾಗಿರುವುದರಿಂದ, ೩ ಲಕ್ಷ ೭೦ ಸಾವಿರ ರೂಪಾಯಿ ನಷ್ಟವಾಗುವುದಕ್ಕೆ ಕಾರಣ.

ಮತ್ತು ರಾಮ್‌ಬಹದೂರ್ ಠಾಕೂರ್ ಕಂಪೆನಿಯವರಿಗೆ ಒಂದು ಲಕ್ಷ ಟನ್ ಅದುರು ಸಪ್ಲೈ ಮಾಡಿರುವುದರಿಂದ ೩.೮ ಲಕ್ಷ ರೂಪಾಯಿ ಬರಬೇಕಾಗಿದೆ. ರಾಮ್‌ಬಹದೂರ್ ಠಾಕೂರು ಕಂಪೆನಿಯವರು ಫೈಲ್ ಮಾಡಿದ ಸೂಟಿನಲ್ಲಿ ನಾವು ೩.೮ ಲಕ್ಷ ರೂಪಾಯಿ ಬರಬೇಕೆಂದು ಕೌಂಟರ್ ಕ್ಲೈಮ್ ಹಾಕಿದ್ದೇವೆ.

ಮೂರನೆಯದು, ರಾಮ್‌ಬಹದೂರ್ ಠಾಕೂರ್ ಕಂಪೆನಿಯವರು ಸಿವಿಲ್ ಸೂಟಿನಲ್ಲಿ ಒಟ್ಟು ಕ್ಲೈಮ್ ಮಾಡಿದ್ದು ೪೧ ಲಕ್ಷ ೩೭ ಸಾವಿರದ ೮೬೭ ರೂಪಾಯಿ. ಅದು ಯಾವ ಬಾಬಿನಲ್ಲಿ ಎಂದು ಪರ್ಟಿಕ್ಯುಲರ್ಸ್ ಕೇಳಿದರೂ ಸಹ ಕೊಟ್ಟಿಲ್ಲ. ಆದ್ದರಿಂದ ಕೋರ್ಟಿದಲ್ಲಿ ಆ ಪರ್ಟಿಕ್ಯುಲರ್ಸ್ ಕೊಡಬೇಕೆಂದು ಅಪ್ಲಿಕೇಶನ್ ಹಾಕಿದ್ದೇವೆ.

SRI A. R. BADRINARAYAN:—What steps are taken to see that the contr cts are fulfield by the contractors? Is any security taken from the contractors?

ಶ್ರೀ ಎ. ಪಿ. ಅಪ್ಪಣ್ಣ:—ಇವರಲ್ಲಿ ೩೫ ಸಾವಿರ ರೂಪಾಯಿ ಸೆಕ್ಯೂರಿಟಿ ಡಿಪಾಸಿಟ್ ಕೊಟ್ಟಿದ್ದರು. ಅದನ್ನು ಫೋರ್‌ಫೀಟ್ ಮಾಡಿದ್ದೇವೆ. ಮೂರು ಲಕ್ಷದ ೮೦ ಸಾವಿರಕ್ಕೆ ನಾವು ಸೂಟಿನಲ್ಲಿ ಕೌಂಟರ್ ಕ್ಲೈಮ್ ಹಾಕಿದ್ದೇವೆ.

SRI C. K. RAJAIAH SHETTY.—There has been a loss of Rs 3·7 lakhs. The Hon Minister stated that the working cost was Rs. 51-52 and the losses are due to selling the ore at a lesser rate. May I know whether there was something fishy with the officers who were in charge of sale of ore at a cheaper rate Sir?

SRI A. P. APPANNA.—It is not a question of fishy deal. in this incident only The whole affair of the Board of Mineral Development was not carried on, on a commercial line. That is why the Government had to lose nearly one crore of rupees in the B. M. D. affairs. The Government has already ordered an enquiry in to the affairs of the B. M. D. The present Chief Secretary and the then Divisional Commissioner have been asked to conduct the enquiry.

ಶ್ರೀ ಎನ್. ಜಿ. ಹಾಲಪ್ಪ:—ಸುಮಾರು ೪೦ ಲಕ್ಷ ರೂಪಾಯಿಗಳಿಗೆ ಅವರು ದಾವೆ ಹಾಕಿದ್ದಾರೆಂದು ಹೇಳಿದ್ದೀರಿ. ಆದರಲ್ಲಿ ಅವರ ಕ್ಲೈಮ್ಸನ್ನು ಡಿಸ್ಪ್ಯೂಟ್ ಮಾಡಿದ್ದೀರಾ, ಅಥವಾ ಯಾವುದನ್ನಾದರೂ ಒಪ್ಪಿಕೊಂಡಿದ್ದೀರಾ?.

ಶ್ರೀ ಎ. ಪಿ. ಅಪ್ಪಣ್ಣ:—ಅವರ ಕ್ಲೈಮ್ಸನ್ನು ಪೂರ್ತಿಯಾಗಿ ಡಿಸ್ಪ್ಯೂಟ್ ಮಾಡಿ ನಾವು ಮೂರು ಲಕ್ಷ ೮೦ ಸಾವಿರ ಬರಬೇಕೆಂದು ಕೌಂಟರ್ ಕ್ಲೈಮ್ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್:—ಈ ಬಿ. ಎಂ. ಡಿ. ಕಮರ್ಶಿಯಲ್ ಲೈನಿನಲ್ಲಿ ರನ್ ಆಗುತ್ತಾ ಇರಲಿಲ್ಲ ವೆಂದು ಹೇಳಿದ್ದೀರಿ. ಅಂದರೆ ಏನು ಧರ್ಮಛತ್ರ ಇದ್ದ ಹಾಗೆ ಇತ್ತೇ? ಈ ಪ್ರೈವೇಟ್ ಎಂಟರ್ ಪ್ರೈಸ್‌ಗೆ ಎಷ್ಟು ಬೇಕಾದರೂ ಕೊಡಬೇಕು, ಒಳಗಿಂದ ಒಳಗೆ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಬೇಕೆಂದು ರ ೨. ೫೧–೫೨ ಇದ್ದದನ್ನು ರೂ. ೪೭ಕ್ಕೆ ಕೊಟ್ಟಿದ್ದೀರಾ, ಮತ್ತು ಅದಕ್ಕೆ ಈ ರೀತಿ ನಷ್ಟವಾಯಿತೆ?

ಶ್ರೀ ಎ. ಪಿ. ಅಪ್ಪಣ್ಣ.—ಈಗ ಎನ್‌ಕ್ವೈರಿ ಮಾಡಿಲ್ಲದಿರುವುದರಿಂದ ಯಾವ ಕಾರಣದಿಂದ ಎಂದು ಹೇಳುವುದಕ್ಕಾಗುವುದಿಲ್ಲ. ಸಾಧಾರಣವಾಗಿ ಬಿ. ಎಂ. ಡಿ. ಕೆಲಸ ಮಾಡುತ್ತಿರುವ ಕಾಲದಲ್ಲಿ ಅಲ್ಲಿ ಒಂದಕ್ಕೆ ಎರಡು ಪಾಲು ಸ್ಟಾಫ್ ಇತ್ತು. ಪ್ರತಿಯೊಂದು ಮೈನೂ ಎಕನಾಮಿಕಲ್ ಯುನಿಟಾಗಿ ನಡೆಯುತ್ತಿರಲಿಲ್ಲ. ಒಂದೊಂದು ಯುನಿಟಿನಲ್ಲಿ ಎಷ್ಟು ಖರ್ಚು ಎಷ್ಟು ಲಾಭ ಎಂಬ ಲೆಕ್ಕ ಇಟ್ಟಿರಲಿಲ್ಲ. There was indiscriminate mining and pilling of the stock in the mine-heads without disposing of the ore. ಇದೆಲ್ಲಾ ಆಗಿ ಅನಾವಶ್ಯವಾದ ಮೆಷಿನರಿ ತೆಗೆದು ಇಟ್ಟು, ಡೆಡ್ ಸ್ಟಾಕಾಗಿ, ಮತ್ತು ಹೆಚ್ಚಾಗಿ ಲಾರಿಗಳನ್ನು ಕೊಂಡುಕೊಂಡಿರುವುದರಿಂದ ಹೀಗೆ ಆಯಿತು.

ಶ್ರೀ ಕೆ. ಎಂ. ತಮ್ಮಯ್ಯ.—ಬಿ. ಎಂ. ಡಿ. ಕ್ಲೋಸ್ ಆಗಿ ಎರಡು ವರ್ಷವಾಯ್ತು. ಇನ್ನೂ ಎನ್‌ಕ್ವೈರಿ ಮಾಡುತ್ತಾ ಇದ್ದೀರಿ ಈಗ ಇದರ ಎಷ್ಟೊ ಆಫೀಸರುಗಳು ರಿಟ್ಯಾರ್ ಆಗಿ ಹೋಗಿದ್ದಾರೆ ಎಂಬುದು ಗೊತ್ತಿಲ್ಲ. ಆದ್ದರಿಂದ ಇದನ್ನು ವಸೂಲಿ ಯಾವಾಗ ಮಾಡುತ್ತೀರಿ ಮತ್ತು ಹೇಗೆ ಮಾಡುತ್ತಿರಿ?

ಶ್ರೀ ಎ. ಪಿ. ಅಪ್ಪಣ್ಣ.—ನಾವು ಯಾರ ಮೇಲೆ ಹೊಣೆ ಹೊರಬೇಕೋ, ಅವರ ಮೇಲೆ ಸಿವಿಲ್ ಸೂಟ್ ಹಾಕುತ್ತಿದ್ದೇವೆ. ಮತ್ತು ಇನ್‌ಕ್ವೈರಿಗೆ ಎಂಟ್ರಸ್ಟ್ ಮಾಡಿದ್ದು ಒಂದು ವರ್ಷ ಹಿಂದೆ. ಆದ್ದರಿಂದ ರಿಪೋರ್ಟು ಬಂದ ಮೇಲೆ ಆಫೀಸರ್ಸ್ ಯಾರು ಇನ್‌ವಾಲ್ವ್ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಆ ರಿಪೋರ್ಟಿನ ಆಧಾರದ ಮೇಲೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸರ್ಕಾರಕ್ಕೆ ಬರಬೇಕಾದ ದುಡ್ಡು ಎಷ್ಟು ? ಕೊಡಬೇಕಾದವರು ಯಾರ್ಯಾರು ಇದ್ದಾರೋ ಅಂಥವರಿಗೆ ವಿನಾಯಿತಿ ಕೊಡಬೇಕೆಂದು ತಮ್ಮ ಮೇಲೆ ಪ್ರಭಾವ ಬೀರುತ್ತಾ ಇರುವ ವರ್ತಮಾನ ಬಂದಿದೆ. ಆದರಲ್ಲಿ ಸತ್ಯಾಂಶವಿದೆಯೆ ?

ಶ್ರೀ ಎ. ಪಿ ಅಪ್ಪಣ್ಣ :—ಇದರಲ್ಲಿ ಕೆಲವನ್ನು ಹೈರ್ ಪರ್ಚೇಸ್ ಸಿಸ್ಟಂನಲ್ಲಿ ಕೊಟ್ಟಿದೆ. ಗ್ರಾಮಸ್ಥರಲ್ಲಿ ಕೆಲವರಿಗೆ ಲಾರಿ ಕೊಟ್ಟಿದ್ದಾರೆ. ವಾಲ್ಯುಯೇಷನ್ ನಿಗದಿಮಾಡಿರುವುದು ಸರಿಯಾಗಿಲ್ಲವೆಂದು ಅಪೀಲು ಬಂದಿವೆ. ಅವರಿಗೆ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ಆದರೆ ಇಷ್ಟರವರೆಗೆ ಯಾವ ಒಂದು ಕಾರಣದಿಂದಲೂ ಮೊದಲು ಫಿಕ್ಸ್ ಮಾಡಿದಂಥ ವಾಲ್ಯುಯೇಷನ್ನನ್ನು ಕಡಿಮೆ ಮಾಡುವಂಥ ಆರ್ಡರನ್ನು ಸರ್ಕಾರ ಮಾಡಿಲ್ಲ. ವ್ಯಾಲ್ಯುಯೇಷನ್ ಸರಿಯಾಗಿಲ್ಲವೆಂದು ಈಗ ಅದನ್ನು ಬದಲಾವಣೆ ಮಾಡುವ ಸ್ಥಿತಿಯಲ್ಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇದಕ್ಕೆ ಯಾರ ಪ್ರಭಾವ ಬಂದಿದೆ ?

ಶ್ರೀ ಎ. ಪಿ. ಅಪ್ಪಣ್ಣ :—ಪ್ರಭಾವ ನನ್ನ ಮೇಲೆ ಬಿದ್ದುದಲ್ಲ.

LEASING OUT MUNICIPAL BUS STAND'S TAXI SHEDS FOR RUNNING A CANTEEN IN MANGALORE.

374 SRI B. BHASKAR SHETTY (Kaup). —

Will the Minister of Statefor Municipal Administration be pleased to State.—

(*a*) whether the City Municipal Commissioner of Mangalore Municipality, recommended to the Government to accord permission to lease out the Municipal Bus Stands Taxi Sheds-measuring 80x 16ft for the purpose of running a canteen in fauour of a person on a daily rent of Rs. 16 only for a period of five years on 11th February 1969;

(*b*) whether the Sanction was accorded to the proposal of the said Municipal Commissioner by the Divisional Commissioner,

(*c*) the reasons why the Divisional Commissioner Mysore has accorded sanction to the proposal of the Municipal Commissioner which was made even before 11th February 1969 without consulting the newly constituted Municipal Council which came into being on 11th February 1969 which has powers to lease out upto a period of five years?

SRI B. M. PATIL (Minister of State for Municipal Administration).—

(*a*) No.

(*b*) Yes.

(*c*) The Divisional Commissioner in exercise of the powers delegated to him accorded sanction before the new Municipal Council was constituted.

ಶ್ರೀ ಬಿ. ಭಾಸ್ಕರಶೆಟ್ಟಿ :—ನಿಮ್ಮ ಡಿವಿಜನಲ್ ಕಮಿಷನರ್ ಅವರು ಮಂಜೂರಾತಿಯನ್ನು ಯಾವಾಗ ಕೊಟ್ಟರು?